ಅಧ್ಯಕ್ಷರು : ಈಗ ನಮ್ಮ ಮುಂದಿರುವ ಎರಡು ಜರೂರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವ ವಿಷಯಗಳನ್ನು ತೆಗೆದುಕೊಂಡು ಕಾಲಿಂಗ್ ಅಟೆನ್‌ಷನ್‌ನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಸಿ. ಗುರುಸ್ವಾಮಿ : ಈಗಾಗಲೇ ತಮ್ಮ ಗಮನಕ್ಕೆ ತಂದಹಾಗೆ ಕಳೆದ 80 ದಿವಸಗಳಿಂದ ಡಿ.ಸಿ.ಆಫೀಸ್ ಮುಂದೆ ಸ್ಟೈಕ್ ಮಾಡುತ್ತಿದ್ದಾರೆ. ಇನ್ನು ಪರಿಹಾರವನ್ನು ಕೊಟ್ಟಿಲ್ಲ.

ಅಧ್ಯಕ್ಷರು : ತಾವು ದಯವಿಟ್ಟು ನನ್ನ ಕಛೇರಿಗೆ ಬನ್ನಿ, ನಿಮಗೆ ಅಲೋ ಮಾಡಿದರೆ ಎಲ್ಲರಿಗೆ ಅಲೋ ಮಾಡಬೇಕಾಗುತ್ತದೆ.

(vii). ಚಿಕ್ಕಬಳ್ಳಾಪುರ ಉಪವಿಭಾಗವನ್ನು ಜಿಲ್ಲೆಯನ್ನಾಗಿ ಪರಿವರ್ತನೆ ಮಾಡುವ ಬಗ್ಗೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಕೆ

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಉಪವಿಭಾಗವನ್ನು ಜಿಲ್ಲೆಯನ್ನಾಗಿ ಪರಿವರ್ತನೆ ಮಾಡಿ ಎಂದು ಸಾರ್ವಜನಿಕರು ನಾಗತೀಕ ವೇದಿಕೆಯ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ 20ನೇ ತಾರೀಖು ಜಿಲ್ಲೆಗೆ ಬಂದಾಗ ಮನವಿ ಪತ್ರವನ್ನು ಕೊಟ್ಟಿದ್ದಾರೆ. ಇವತ್ತು ಚಿಕ್ಕಬಳ್ಳಾಪುರ ಉಪಳಿಭಾಗವನ್ನು ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲೆಯನ್ನಾಗಿ ಮಾಡಿ ಎಂದು ಬಹಳ ದಿವಸಗಳಿಂದ ಹೋರಾಟ ಸಮಿತಿಯವರು ನಡೆಸಿಕೊಂಡು ಬರುತ್ತಿದ್ದಾರೆ. ಇವತ್ತು ನಮಗೆ ಬಹಳ ಅನಾನುಕೂಲಗಳಿವೆ; ಇವತ್ತು ಕೋಲಾರ ಜಿಲ್ಲೆಯಲ್ಲಿ ಉಪವಿಭಾಗ ಇರುವುದರಿಂದ ನಮಗೆ ಅನಾನುಕೂಲವಾಗಿದೆ; ಕೋಲಾರ ಜಿಲ್ಲೆಗೆ ಹೋಗಿ ಬರಬೇಕಾದರೆ ನಮ್ಮ ಈ ತಾಲ್ಲೂಕಿನವರು ಸುಮಾರು 150 ಕಿ.ಮೀ. ದೂರ ಹೋಗಬೇಕಾಗುತ್ತದೆ. ಭಾಗೇಪಲ್ಲಿ, ಗುಡಿಬಂಡೆ, ಗೌರಿಬಿಡನೂರು, ಚಿಂತಾಮಣಿ, ಶಿಡ್ಲಘಟ್ಟ ಇಲ್ಲಿಂದ ಸುಮಾರು 150 ಕಿ.ಮಿ. ದೂರದಲ್ಲಿ ಕೋಲಾರ ಕೇಂದ್ರ ಸ್ಥಾನವಾಗಿದೆ. ಇಲ್ಲಿನ ರೈತರಿಗೆ ಯಾವ ರೀತಿಯ ಪರಿಸ್ಥಿತಿ ಇದೆಯೆಂದರೆ ಯಾವುದೇ ಒಂದು ಕೆಲಸವನ್ನು ಮಾಡಿಸಿಕೊಳ್ಳಲು, ಅವರು ಜಿಲ್ಲಾ ಕೇಂದ್ರಕ್ಕೆ ಹೋಗಲಾಗುತ್ತಿಲ್ಲ. ಏಕೆಂದರೆ ಯಾವ ರಸ್ತೆಗಳ ಕೂಡ ಸರಿಯಾಗಿಲ್ಲ. ನಾವು ಬೆಂಗಳೂರಿಗೆ ಬರಬೇಕಾದರೆ ಸುಮಾರು 60 ಕಿ.ಮೀ. ದೂರದಿಂದ ಬರಬೇಕಾಗಿದೆ, ಆದರೆ ಕೋಲಾರಕ್ಕೆ ಹೋಗಬೇಕಾದರೆ 3 ಗಂಟೆಗಳ ಕಾಲ ತಗೆದುಕೊಳ್ಳುತ್ತದೆ. ಮೊನ್ನೆ ನಾನು ಕಂದಾಯ ಸಚಿವರನ್ನು ಕೇಳಿದಾಗ, ಅವರು ವಿಶ್ವೇಶ್ವರಯ್ಯ ಜಿಲ್ಲೆಯನ್ನು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರಿಸಿದ್ದಾರೆ. ಇದರ ಬಗ್ಗೆ ಯಾರು ಕೂಡ ಗಮನವನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಸುಮಾರು ವರ್ಷಗಳಿಂದ ಆ ಭಾಗದ ಜನರು ಇದನ್ನು ಕೇಳುತ್ತಾ ಬಂದಿದ್ದಾರೆ; ಅದರೂ ಇದನ್ನು ಹಾಗೆಯೇ ಬಿಟ್ಟಿದ್ದಾರೆ. ಆದರೆ ಕಳೆದ ಸಲ 7 ಜಿಲ್ಲೆಗಳನ್ನು ಹೊಸದಾಗಿ ರಚಿಸಿದ್ದಾರೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ಕಂದಾಯ ಸಚಿವರು ಗಮನಿಸಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಬೇರೆ ಹೊಸ ಜಿಲ್ಲೆಗಳನ್ನು ರಚಿಸುವಾಗ ಇದರ ಬಗ್ಗೆ ವಿಚಾರಣೆ ಮಾಡಬಹುದು.

ಶ್ರೀ ಎನ್. ಸಂಪಂಗಿ : ಆ ಹೊಸ ಜಿಲ್ಲೆಗಳನ್ನು ಯಾವ ಆಧಾರದ ಮೇಲೆ ರಚಿಸಿದ್ದಾರೆಂದು ನಾನು ಕೇಳಿದಾಗ ಕಂದಾಯ ಮಂತ್ರಿಗಳು, ದಾವಣಗೆರೆಯ 6 ತಾಲ್ಲೂಕುಗಳ ಜನಸಂಖ್ಯೆ 15.59 ಲಕ್ಷ, ಬಾಗಲಕೋಟೆ 6 ತಾಲ್ಲೂಕಿನ ಜನಸಂಖ್ಯೆ 13.94 ಲಕ್ಷ, ಗದಗ್‌ನ 5 ತಾಲ್ಲೂಕುಗಳ ಜನಸಂಖ್ಯೆ 8.59 ಲಕ್ಷ, ಹಾವೇರಿಯ 7 ತಾಲ್ಲೂಕುಗಳ ಜನಸಂಖ್ಯೆ 12.69 ಲಕ್ಷ, ಉಡುಪಿಯ 3 ತಾಲ್ಲೂಕುಗಳ ಜನಸಂಖ್ಯೆ 10.60 ಲಕ್ಷ, ಕೊಪ್ಪಳ 4 ತಾಲ್ಲೂಕಿನ ಜನಸಂಖ್ಯೆ 90.58 ಲಕ್ಷ ಜನಸಂಖ್ಯೆ ಇದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ. 16 ಲಕ್ಷ ಜನಸಂಖ್ಯೆಯಿರುವ ಚಿಕ್ಕಬಳ್ಳಾಪುರ ಉಪವಿಭಾಗ ಭೌಗೋಳಿಕವಾಗಿ ಕರ್ನಾಟಕದಲ್ಲಿ ಬಳಹ ದೊಡ್ಡ ವಿಭಾಗವಾಗಿದೆ. ಇವತ್ತು ಬಹಳ ದಿವಸಗಳಿಂದ ಆಸೆಯನ್ನು ಇಟ್ಟುಕೊಂಡಿರತಕ್ಕಂತಹ ಜನಕ್ಕೆ ನಿರಾಸೆಯಾಗಿದೆ. ಇವತ್ತು ಸರ್. ಎಂ. ವಿಶ್ವೇಶ್ವರಯ್ಯನವರು ಜನಿಸಿದಂತಹ ಸ್ಥಳ ಮುದ್ದೇನಹಳ್ಳಿಯಾಗಿದ್ದು, ಅದು ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿದೆ. ಇವತ್ತು ಸರ್. ಎಂ. ವಿಶ್ವೇಶ್ವರಯ್ಯನವರು ವಾಸವಿದ್ದಂತಹ ಮನೆಯನ್ನು ನಾವು ಇವತ್ತು ಇಲ್ಲಿಗೆ ಬಂದು ಆ ಮನೆಯನ್ನು ಶುಚಿ ಮಾಡಿ ವಸ್ತು ಸಂಗ್ರಹಣೆ ಮಾಡಿ ಎಂದು ಸರ್ಕಾರವನ್ನು ಕೇಳಿದಾಗ ಸರ್.ಎಂ.ವಿಶ್ವೇಶ್ವರಯ್ಯನವರು ಪ್ರತಿಮೆಯನ್ನು ಸ್ಥಾಪಿಸುವುದಕ್ಕೋಸ್ಕರ 2.5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ; ಇದರಿಂದ ನಮಗೆ ಬಹಳ ಸಂತೋಷವಾಗಿದೆ, ಅದಕ್ಕಾಗಿ ನಾವು ಸರ್ಕಾರಕ್ಕೆ ಅಭಿನಂದನೆಯನ್ನು ಹೇಳುತ್ತೇವೆ. ಚಿಕ್ಕಬಳ್ಳಾಪುರವನ್ನು ನೀವು ಯಾವುದೇ ರೀತಿ ತೆಗೆದುಕೊಂಡರೂ ಅದು ಹೃದಯದ ಭಾಗದಲ್ಲಿದೆ. ನೀವು ಬಾಗೇಪಲ್ಲಿಯಿಂದ ಚಿಕ್ಕಬಳ್ಳಾಪುರಕ್ಕೆ ಬಂದರೆ 30 ಕಿಲೋಮೀಟರ್. ಚಿಂತಾಮಣಿಯಿಂದ ಚಿಕ್ಕಬಳ್ಳಾಪುರಕ್ಕೆ ಬಂದರತ 30 ಕಿಲೋಮೀಟರ್. ಶಿಡ್ಲಘಟ್ಟದಿಂದ ಚಿಕ್ಕಬಳ್ಳಾಪುರಕ್ಕೆ ಬಂದರೆ 30 ಕಿಲೋಮೀಟರ್. ಚಿಕ್ಕಿಬಳ್ಳಾಪುರ ಹೃದಯ ಭಾಗದಲ್ಲಿರತಕ್ಕದ್ದು.

ಅಧ್ಯಕ್ಷರು : ನೀವು ಹೇಳುವುದು ಮಂತ್ರಿಗಳಿಗೆ ಅರ್ಥವಾಗಿದೆ. ಚಿಕ್ಕಿಬಳ್ಳಾಪುರವನ್ನು ಹೊಸ ಜಿಲ್ಲೆಯನ್ನಾಗಿ ಮಾಡಬೇಕು ಅಷ್ಟೆ.

ಶ್ರೀ ಎನ್.ಸಂಪಂಗಿ : ರೈತ ಕೋಲಾರದಲ್ಲಿ ತಕ್ಕ ನ್ಯಾಯಾಲಯಕ್ಕೆ ಹೋಗಬೇಕಾಗಿದ್ದರೆ ಬಸ್ ಸಿಗದೆ ಅವನು ಬಸ್ ಹಿಡಿದು ಕೋಲಾರಕ್ಕೆ ಹೋಗುವಷ್ಟರಲ್ಲಿ ನ್ಯಾಯಾಲಯದಲ್ಲಿ ಅವನಿಗೆ ಶಿಕ್ಷೆಯಾಗಿರುತ್ತದೆ. ಸರ್ಕಾರಿ ಬಸ್ ನಮ್ಮ ಕಡೆ ಸರಿಯಾಗಿ ಓಡಾಟ ಮಾಡುತ್ತಿಲ್ಲ. ಇವತ್ತು ನಮ್ಮ ರೈತರಿಗೆ ಯಾವುದೇ ಅನುಕೂಲಗಳು ಇಲ್ಲ. ಇದನ್ನು ಅರ್ಥಮಾಡಿಕೊಂಡು ಹೊಸದಾಗಿ ಏನು ಏಳು ಜಿಲ್ಲೆಗಳನ್ನು ಜನಸಂಖ್ಯೆಯ ಆಧಾರದ ಮೇಲೆ ಮಾಡಿದ್ದೀರಿ, ವಿಸ್ತೀರ್ಣದ ಆಧಾರದ ಮೇಲೆ ಮಾಡಿದ್ದೀರಿ, ಅದಕ್ಕಿಂತ ಹೆಚ್ಚಿಗೆ ನಮ್ಮ ಚಿಕ್ಕಬಳ್ಳಾಪುರ ಇದೆ. ಜನಸಂಖ್ಯೆಯ ಆಧಾರ ತೆಗೆದುಕೊಂಡರೆ 16 ಲಕ್ಷ ಜನಸಂಖ್ಯೆಯಿದೆ. ಆದರೂ ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಮಾಡುವುದನ್ನು ಕೈ ಬಿಟ್ಟಿದ್ದೀರಿ. ಕಳೆದ ಸಲ ಹೊಸ ಜಿಲ್ಲೆಗಳನ್ನು ಮಾಡುವಾಗ ಇದನ್ನು ಗಮನದಲ್ಲಿಟ್ಟುಕೊಂಡಿದ್ದರೆ ನಮ್ಮ ಚಿಕ್ಕಬಳ್ಳಾಪುರ ವಿಶ್ವೇಶ್ವರಯ್ಯ ಜಿಲ್ಲೆಯಾಗುತ್ತಿತ್ತು.

ಅಧ್ಯಕ್ಷರು : ಅದೇ ಆಧಾರದ ಮೇಲೆ ಹೊಸ ಜಿಲ್ಲೆ ಮಾಡಿಯೆಂದು ಹೇಳಿ.

ಶ್ರೀ ಎನ್.ಸಂಪಂಗಿ : ಆದಷ್ಟು ಬೇಗ ಚಿಕ್ಕಬಳ್ಳಾಪುರವನ್ನು ಹೊಸ ಜಿಲ್ಲೆಯನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ಏಳು ಹೊಸ ಜಿಲ್ಲೆಗಳನ್ನು ಮಾಡತಕ್ಕ ಸಂದರ್ಭದಲ್ಲಿ ಚಿಕ್ಕಬಳ್ಳಾಪುರವನ್ನು ಕೈ ಬಿಟ್ಟಿದ್ದಾರೆಂದು ಗೊತ್ತಿಲ್ಲ. ನಮ್ಮ ಸರ್ಕಾರ ಹೊಸ ಜಿಲ್ಲೆಗಳನ್ನು ಮಾಡತಕ್ಕ ಸಂದರ್ಭದಲ್ಲಿ ಖಂಡಿತಾ ಇದನ್ನು ಪರಿಶೀಲನೆ ಮಾಡುತ್ತೇನೆ.

(viii) ಬೆಂಗಳೂರಿನ ಸುತ್ತಮುತ್ತ ಸರ್ಕಾರಿ ಜಮೀನುಗಳ ಕಬಳಿಕೆ ಆಗುತ್ತಿರುವುದರ ಬಗ್ಗೆ :

+ ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಸುತ್ತಮುತ್ತ ತಮ್ಮ ಮೂಲಕ ಸೆಳೆಯುತ್ತೇನೆ. ಬೆಂಗಳೂರು ಸುತ್ತಮುತ್ತ ಇರತಕ್ಕ ತುಂಬಾ ಬೆಲೆಬಾಳುವಂತಹ ಜಮೀನನ್ನು ಅದರಲ್ಲೂ ನನ್ನ ಉತ್ತರಹಳ್ಳಿ ಕ್ಷೇತ್ರದಲ್ಲಿ ಸಾಕಷ್ಟು ಬೆಲೆ ಬಾಳುವಂತಹ ಜಮೀನನ್ನು ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ವ್ಯವಸ್ಥಿತವಾಗಿ ಒಂದು ಸಂಚನ್ನು ಮಾಡಿ, ಸರ್ಕಾರ ಕೂಡ ಆ ತರಹ ಮಾಡುವುದಿಲ್ಲ. ಅಷ್ಟು ನೀಟಾಗಿ ಖಾತೆ ಕಂದಾಯ ಮಾಡಿ ಅದನ್ನು ತಿದ್ದಿ ಕೋರ್ಟ್ ಸ್ಟೇ ಆರ್ಡರ್ ಇದ್ದರೂ ಕೂಡ ಅಲ್ಲಿ ಮನೆ ಕಟ್ಟಿಕೊಂಡು 20 ವರ್ಷಗಳಿಂದ ವಾಸ ಮಾಡಿದ ಮೇಲೆ ಅದು ಸರ್ಕಾರಿ ಜಮೀನೆಂದು ಸರ್ಕಾರಕ್ಕೆ ಗೊತ್ತಾಗುತ್ತದೆ. ಅಷ್ಟು ವ್ಯವಸ್ಥಿತವಾಗಿ ಸರ್ಕಾರಿ ಜಮೀನನ್ನು ಲೂಟಿ ಮಾಡುತ್ತಿದ್ದಾರೆ. ಇದರಲ್ಲಿ ಮಾಫಿಯಾ ಗ್ಯಾಂಗ್ ಬ್ಯಾಡ್ ಎಲಿಮೆಂಟ್ಸ್ ರೌಡಿಗಳು ಇನ್‌ವಾಲ್ವ್ ಆಗಿದ್ದಾರೆ. ಸರ್ಕಾರಿ ಜಮೀನನ್ನು ಕಬಳಿಸಿ ಕೋಟ್ಯಾಂತರ ರೂಪಾಯಿ ಕಬಳಿಕೆ ಮಾಡುವಂತಹ ಸಂಚು ಉತ್ತರಹಳ್ಳಿ ಕ್ಷೇತ್ರದಲ್ಲಿ ನಡೆಯುತ್ತಿದೆ. ಇದನ್ನು ನಿಲ್ಲಿಸುವುದಕ್ಕೆ ಟಾಸ್ಕ್‌ಫೋರ್ಸ್ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿತ್ತು. ತುಂಬಾ ವರ್ಷಗಳಿಂದ ಟಾಸ್ಕ್‌ಫೋರ್ಸ್ ಇದುವರೆಗೆ ಮಾಡಲಿಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಕಂದಾಯಮಂತ್ರಿಗಳು ಹೇಳಿದ್ದಾರೆ. ಕಂದಾಯ ಮಂತ್ರಿಗಳೂ ಪ್ರೆಸ್‌ಮೀಟ್ ಮಾಡಿ ಹೇಳಿದ್ದಾರೆ. ಹತ್ತು ಪ್ರೆಸ್‌ಮೀಟ್‌ನಲ್ಲಿ ಇದನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅದನ್ನು ಇದುವರೆಗೆ ಮಾಡಲಿಲ್ಲ. ಭೂ ಕಬಳಿಕೆಯಂತೂ ನಡೆಯುತ್ತಲೇ ಇದೆ. ಕಬಳಿಕೆ ಯಾವರೀತಿ ನಡೆಯುತ್ತಿದೆ ಎನ್ನುವ ಬಗ್ಗೆ ಒಂದು ಇನ್ಸಿಡೆಂಟ್ ಹೇಳುತ್ತೇನೆ. ಕೆಂಗೇರಿ ಬೆಂಗಳೂರಿಗೆ ದ 12 ಕಿಲೋಮೀಟರ್ ದೂರದಲ್ಲಿದೆ. ಸುಮಾರು 150 ಎಕರೆ ಸರ್ಕಾರಿ ಜಮೀನು ಒಂದೇ ಜಾಗದಲ್ಲಿದೆ. ಕಂದಾಯ ಅಧಿಕಾರಿಗಳು ಅತಿಕ್ರಮ ಮಾಡಿರುವವರನ್ನು ತೆರವುಮಾಡಿಸಿ ತಮ್ಮ ಸುಬರ್ದಿಗೆ ತೆಗೆದುಕೊಳ್ಳಬೇಕಾಗಿತ್ತು. ಅದನ್ನು ತೆಗೆದುಕೊಳ್ಳಲಿಲ್ಲ. ಹಿಂದಿನ ಅಧಿಕಾರಿಗಳು ನೀವು ಏನು ಬೇಕಾದರೂ ಮಾಡಿಕೊಳ್ಳಿಯೆಂದು ಬಿಟ್ಟುಬಿಟ್ಟರು. ಸರ್ವೆ ನಂಬರ್ ಮತ್ತು ಗ್ರಾಮಗಳ ಹೆಸರು ಹೇಳುತ್ತೇನೆ. ಕುಂಬಳಗೋಡು, ಕಣಿಮಿಣಿಕೆ ಮತ್ತು ಕಂಬೀಪುರ. ಸರ್ವೆ ನಂಬರ್ 180. ಬೆಂಗಳೂರಿಗೆ 12 ಕಿಲೋಮೀಟರ್ ಹತ್ತಿರವಿರತಕ್ಕ ಈ ಊರುಗಳಲ್ಲಿ 150 ಎಕರೆ ಜಮೀನು ಒಂದೇ ಕಡೆ ಇದೆ. ಅಷ್ಟು ಸರ್ಕಾರೀ ಜಮೀನನ್ನು ಏಕೆ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಿಲ್ಲ? ಅಲ್ಲಿನ ಜನ ತಿರುಗಿಬಿದ್ದು ಅವರೇ ಕೋರ್ಟಿಗೆ ಹೋದರು. ಸರ್ಕಾರಿ ಅಧಿಕಾರಿಗಳು ಆ ಕೆಲಸವನ್ನು ಮಾಡಲಿಲಲ್ಲ, ಅಲ್ಲಿನ ಜನ ನಾಗರೀಕ ವೇದಿಕೆ ಮಾಡಿಕೊಂಡು ಸರ್ಕಾರಕ್ಕೆ ಒಂದು ಮನವಿಯನ್ನು ಕೊಟ್ಟರು. ಅದನ್ನು ಸರ್ಕಾರ ಅಕ್ಸೆಪ್ಟ್ ಮಾಡಲಿಲ್ಲ. ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ಹಾಕಿದ್ದಾರೆ. ಅದರ ಮೇಲೆ ಹೈಕೋರ್ಟ್ ಆರ್ಡರ್